ಹೀಗೆ ಅಪ್ಪನ ಮತ್ತು ಅವನ ಕ್ರಿಕೆಟ್ ತಂಡದ ರೋಚಕತೆಗಳ ಪಟ್ಟಿ ಅಸಂಖ್ಯ. ಅದೆಷ್ಟೋ ಪಂದ್ಯಗಳನ್ನು ಅಪ್ಪನ ತಂಡ ಗೆದ್ದು ಬೀಗಿತ್ತು. ಅಪ್ಪನ ತಂಡ ಸೋತಿದ್ದು ಕೇವಲ ಒಂದೇ ಒಂದು ಪಂದ್ಯ. ಅದು 'ಮಾಯಿಪ್ಪಾಡಿ' ತಂಡದ ಎದುರು. ಅಲ್ಲಿಯವರೆಗೆ ಎಲ್ಲಾ ತಂಡಗಳು ಪರಸ್ಪರ ಸದಾ ಅಂಡರ್ ಆರ್ಮ್ ಗುಡ್‌ಲೆಂಗ್ತ್ ಬೌಲಿಂಗ್‌ನಲ್ಲಿ ಆಡುತ್ತಿದ್ದವು. ಅಂದು ಮಾಯಿಪ್ಪಾಡಿ ತಂಡದವರು ಮಾತ್ರ ಗುಡ್ ಲೆಂಗ್ತ್ ಬೌಲಿಂಗ್ ಬದಿಗಿರಿಸಿ 'ಚಿರಿ ಚಿರಿ ಬಾಲ್' (ಚೆಂಡನ್ನು ನೆಲದಲ್ಲಿ ಜೋರಾಗಿ ಉರುಳಿಸುವುದು. ಚೆಂಡು ಪುಟಿಯುತ್ತಿರಲಿಲ್ಲ) ಎಂಬ ನೂತನ ಪ್ರಯೋಗವನ್ನು ಮಾಡಿದ ಪರಿಣಾಮ ಅಪ್ಪನ ತಂಡ ಮೊದಲ ಬಾರಿಗೆ ಸೋಲು ಅನುಭವಿಸಬೇಕಾಯಿತು. ಹೊಸ ಯೋಚನೆ ಶೈಲಿ ತಂತ್ರಗಾರಿಕೆಗಳು ಆಟದ ಮೈದಾನದೊಳಗಿಳಿದವು. ಇತ್ತ ತಂಡದ ಸದಸ್ಯರು ಒಬ್ಬೊಬ್ಬರಾಗಿ ಕೂಳನ್ನರಸಲು ವಲಸೆ ಹೊರಟ ಪರಿಣಾಮ, ಅಪ್ಪನ ತಂಡವು ಮುಂದೆ ಯಾವುದೇ ಪಂದ್ಯಗಳನ್ನು ಆಡದೆ ಹೋಯಿತು.

ಬಾಲ್ಯದಲ್ಲಿ ಅಪ್ಪನ ಸ್ನೇಹಿತರ, ಸಮಾನಮನಸ್ಕ ಬಂಧುಗಳ ಜೊತೆಯಲ್ಲಿ ಬಹಳಷ್ಟು ಕಡೆಗಳಿಗೆಲ್ಲ ಸುತ್ತಿ ಉಂಡು ತೇಗಿದ್ದಿದೆ. ಅಪ್ಪನ ಜೊತೆಗೆ ಕುಂಬಳೆ ಪೇಟೆಗೆ ಹೋಗುತ್ತಿದ್ದುದು ಅವಿಸ್ಮರಣೀಯ ಗಳಿಗೆಗಳಲ್ಲೊಂದು. ಅಪ್ಪ ನಡೆಸುತ್ತಿದ್ದ 'ಸಂತೋಷ ಸಾಹಿತ್ಯ ಸದನ' ಎಂಬ ಗ್ರಂಥಾಲಯಕ್ಕೆ ರಜಾ ದಿನಗಳಲ್ಲಿ ನಾನೂ ಹೊರಡುತ್ತಿದ್ದೆ. ಕಾರಣ 'ಹೆಬ್ಬಾರರ ಹೋಟೆಲ್ ಕೃಷ್ಣಭವನ'ದಲ್ಲಿ ಸಿಗುತ್ತಿದ್ದ ತುಪ್ಪದೋಸೆ, ಕಡಲೆ ಉಸುಲಿ, ಸಂಜೀರ, ಬಿಸ್ ಕುಟ್ ರೊಟ್ಟಿ. ಇವುಗಳೆಂದರೆ ನನಗೆ ಪಂಚಪ್ರಾಣ. ಇವತ್ತಿಗೂ ಅತ್ತ ಹೋದರೆ ಅಪ್ಪನ ಜೊತೆಗೆ ಹೊಟೇಲಿಗೆ ಹೋಗಿ ಅದನ್ನು ಸವಿದೇ ಬರುತ್ತೇನೆ. ಸಂಜೆಯ ಹೊತ್ತು ಅಪ್ಪನನ್ನು ಕಾಣಲು ಬಂದವರು ಮಾತನಾಡುತ್ತಲೇ ಇರುತ್ತಿದ್ದರು. ಅವರೆದ್ದೇಳುವ ತನಕ ಗ್ರಂಥಾಲಯದ ಪಕ್ಕದಲ್ಲಿರುವ ರಘುರಾಮ ಆಳ್ವರ ರೇಡಿಯೋ ಶಾಪಿನಲ್ಲಿ, ವಿಶ್ವಮಾಮನ ಟೇಲರಿಂಗ್ ಅಂಗಡಿಯಲ್ಲಿ, ಸುರೇಶ್ ಮಾಮನ 'ಸನತ್ ಸ್ಟುಡಿಯೋದ' ಕನ್ನಡಿಯ ಮುಂದೆ ಸಮಯವನ್ನು ಕಳೆಯುತ್ತಿದ್ದೆ. ಅಪ್ಪ ಸಂತೋಷ್ ಎಂದು ಕೂಗಿದಾಗ ಛಕ್ಕನೆ ಓಡಿ ಬರುತ್ತಿದ್ದೆ.

ಕಿಟಕಿಯನ್ನು ದಬ್ಬಿ ಬೀಸುವ ಸಂಜೆಯ ತಂಗಾಳಿಯ ಜೊತೆಗೆ ಹೆದ್ದಾರಿಯಂಚಿನಲ್ಲಿ ಭೋರ್ಗರೆವ ಕಡಲನಾದವು ನಮ್ಮಿಬ್ಬರ ಸಂಜೆಯ ಕಾಫಿಗೆ ಹಿತವಾದ ಹಿನ್ನಲೆ ಸಂಗೀತವನ್ನು ಒದಗಿಸುತ್ತಿತ್ತು. ಕಿಟಕಿಯ ಹೊರಗೆ ಚಾಚಿಕೊಂಡಿರುವ ಕಲ್ಪವೃಕ್ಷದ ಗರಿಗಳು ಇಳಿಸಂಜೆಯ ಬಿಸಿಲಿಗೆ ತೆರೆದುಕೊಳ್ಳುತ್ತಾ ಮಡಚಿಕೊಳ್ಳುತ್ತಾ ಜೂಟಾಟವನ್ನಾಡುತ್ತಿದ್ದ ಹೊತ್ತಲ್ಲಿ ಆತ್ಮೀಯ ಬಿಸುಪೊಂದು ನಮ್ಮಿಬ್ಬರ ನಡುವೆ ಬೆಸೆದುಗೊಂಡಿರುತ್ತಿತ್ತು. ಅಲ್ಲೂ ನುಸುಳುತ್ತಿದ್ದುದು ಮತ್ತದೇ ಕ್ರಿಕೆಟ್! ಇತ್ತ ಊರಲ್ಲಿ ಗದ್ದೆ ಉಳುವುದನ್ನು ಕಾಣಲು, ನೇಜಿ ನೆಡುವುದನ್ನು ನೋಡಲು ಅಪ್ಪನ ಕೈ ಹಿಡಿದು ಗದ್ದೆಯಂಚಿಗೆ ಹೋಗುತ್ತಿದ್ದಾಗಲೆಲ್ಲ ಮಾತನಾಡುತ್ತಿದ್ದುದು ಒಂದೇ ವಿಷಯಮ ಅದುವೇ ಕ್ರಿಕೆಟ್! ಪತ್ರಿಕೆಯಲ್ಲಿ ಬರುತ್ತಿದ್ದ ಕ್ರಿಕೆಟ್ ಸುದ್ದಿ ಮತ್ತು ಅದರ ಹೆಡ್‌ಲೈನ್ – ಪಂಚ್ ಲೈನ್‌ಗಳನ್ನು, 'ಒಂದು ಓವರ್‌ನಲ್ಲಿ ಮೂರು ವಿಕೆಟ್ ಕಿತ್ತ ಕಪಿಲ್‌ನಿಂದ ಸಿಕ್ಸರ್ ಸುರಿಮಳೆ' ಎಂಬುದನ್ನು ವಿಶಿಷ್ಟ ಕಂಠದಲ್ಲಿ ಉದ್ಗರಿಸಿ, ಅದಕ್ಕೊಂದು ಹಿನ್ನೆಲೆ ಸಂಗೀತವನ್ನು ಟ್ಯಾ... ಟೆ.... ಡಾಮ್... ಡಿಶ್... ಎಂದು ಕೊಟ್ಟು ಅಪ್ಪನ ಛತ್ರಿಯ ಕೆಳಗೆ ಆಶ್ರಯ ಪಡೆದು, ಮಳೆಯ ನೀರಿನಲ್ಲಿ ಕ್ರಿಕೆಟ್ ಆಟದ ಥಿಯರಿಯನ್ನು ಅಪ್ಪನಿಂದ ಹೇಳಿಸಿಕೊಳ್ಳುತ್ತ ಹೆಜ್ಜೆ ಹಾಕುತ್ತಿದ್ದೆ.

1983ರ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಯದು. ಭಾರತ ತಂಡವು ಎಲ್ಲರು ಹುಬ್ಬೇರಿಸುವಂತೆ ಆಟವಾಡಿ ಫೈನಲ್ ಪ್ರವೇಶಿಸಿತ್ತು. ಆಂಗ್ಲರ ಲಾರ್ಡ್ಸ್ ಮೈದಾನದಲ್ಲಿ ಬಲಿಷ್ಠ ವೆಸ್ಟ್ ಇಂಡೀಸ್ ಎದುರು ಭಾರತವು



ಸೆಣೆಸಲಿತ್ತು. ಟಿ.ವಿ. ಇಲ್ಲದ ದಿನಗಳವು. ಅಂತಹ ಸಮಯದಲ್ಲಿ ಫಿಲಿಪ್ಸ್ ರೇಡಿಯೋ ನಮ್ಮ ಏಕೈಕ ಸಂಗಾತಿ. ವಿದ್ಯುತ್ ಕೈಕೊಟ್ಟರೆ ಪರ್ಯಾಯ ವ್ಯವಸ್ಥೆಯೆಂದು, ಆ ದಿನ ಅಪ್ಪ ಪೇಟೆಯಿಂದ ನಾಲ್ಕು ನಿಪ್ಪೋ ಬ್ಯಾಟರಿಗಳನ್ನು ತಂದಿದ್ದ. ಸರಿ ಸುಮಾರು ರಾತ್ರಿ 7.30ರಿಂದ 8ರ ಸಮಯವಿರಬೇಕು, ರೇಡಿಯೋವನ್ನು ಊಟದಮನೆಯ ಪಕ್ಕದ ಕೋಣೆಯಲ್ಲಿರಿಸಿ ಕಾಮೆಂಟರಿ ಕೇಳುತ್ತಿದ್ದೆವು. ಊಟಕ್ಕೆ ಕೂತರೆ ಅಪ್ಪನ ಹಾಗೂ ನನ್ನ ಕಿವಿಗಳು ಕೇಂದ್ರೀಕೃತವಾಗಿರುತ್ತಿದ್ದುದು ಪಕ್ಕದ ಕೋಣೆಯಲ್ಲಿ ಬಿತ್ತರಗೊಳ್ಳುತ್ತಿದ್ದ ಕಾಮೆಂಟರಿಯ ಮೇಲೆ. ನಾವು ಯಾಂತ್ರಿಕವಾಗಿ ಉಣ್ಣುತ್ತಿದ್ದೆವು. ರೇಡಿಯೋದಲ್ಲಿ ಓಹ್! ಎನ್ನುವ ಉದ್ಗಾರ ಬಂದರೆ ಒಮ್ಮೆಲೆ ಬಾಯಿಗೆ ಹೋಗುತ್ತಿದ್ದ ತುತ್ತು ಅಲ್ಲೇ ಸ್ತಬ್ಧವಾಗುತ್ತಿತ್ತು. ಕೊನೆಗೂ ಆ ಗಳಿಗೆ ಬಂದೇ ಬಿಟ್ಟಿತು. ಕಾಮೆಂಟರಿ ಹೇಳುತ್ತಿದ್ದ ವ್ಯಕ್ತಿ ಜೋರಾಗಿ 'ಓಹ್ ಇಟ್ಸ್ ಅನ್ ಹೈ ಹೈ..' ಎಂದು ಕಿರುಚುವಾಗಲೇ ಅಪ್ಪ ಊಟದ ತಟ್ಟೆಯನ್ನು ತಳ್ಳಿ ಪಕ್ಕದ ಕೋಣೆಯನ್ನು ಸೇರಿಯಾಗಿತ್ತು. ಅವನ ಹಿಂದೆಯೇ ನಾನೂ.

ಒಂದು ಕಡೆಯಿಂದ ಅಪ್ಪ ಕಿವಿಯನ್ನು ರೇಡಿಯೋಗೆ ಆನಿಸಿದರೆ, ಇನ್ನೊಂದು ಬದಿಯಿಂದ ನನ್ನ ಪುಟ್ಟ ಕಿವಿಯೂ ರೇಡಿಯೋವನ್ನು ಆಲಿಸುತ್ತಿತ್ತು. ಥಟ್ಟನೆ ಔಟ್..ಔಟ್..ಔಟ್... ಎಂದು ಅಪ್ಪನ ಹರ್ಷೋದ್ಗಾರ. ಅಷ್ಟಕ್ಕೇ 'ಡಿಂಗ ಚಿಕ ಡಿಂಗ ಚಿಕ' ಎಂದು ಕುಪ್ಪಳಿಸಿ ಕುಣಿದು ಅಪ್ಪನ ತೊಡೆಯೇರಿ, 'ಯಾರು ಔಟ್ ಹೇಳು ಅಪ್ಪಾ?' ಎಂದು ಗಲಾಟೆ ಮಾಡುತ್ತಿದ್ದೆ. ಅದಕ್ಕಾತ, 'ಕಪಿಲ್ ಹಿಡಿದ ಅದ್ಭುತ ಕ್ಯಾಚ್‌ನಿಂದ ವಿವಿಯನ್ ರಿಚರ್ಡ್ಸ್ ಔಟ್ ಆದ ಮಗ. ಅದು ಹೇಗೆ ಅಂತೀಯಾ? ಆಗಸಕ್ಕೆ ನೆಗೆದ ಚೆಂಡು ಬೌಂಡರಿ ಗೆರೆಯತ್ತ ಹೋಗುತ್ತಿರುವಾಗ ಅದರ ಹಿಂದೆ ಹಿಂದೆ ಓಡುತ್ತಾ ಓಡುತ್ತಾ ಹಿಡಿದ ಕ್ಯಾಚ್ ಅದಾಗಿತ್ತು. ಸಲೀಸಾಗಿ ಹಿಡಿಯಬಲ್ಲ ಕ್ಯಾಚ್ ಅಲ್ಲ ಮಗನೆ ಅದು. ಬಹಳ ಕಷ್ಟವಾದಾದದ್ದು' ಎಂದು ರಿಚರ್ಡ್ಸ್ ಔಟ್ ಆದ ಖುಷಿಯನ್ನು ಮತ್ತು ಕಪಿಲ್ ಹಿಡಿದ ಕ್ಯಾಚ್‌ನ ರೋಚಕತೆಯನ್ನು ತನ್ನ ಮುಖದ ಮಾಂಸಖಂಡಗಳಲ್ಲಿ ವ್ಯಕ್ತಪಡಿಸುತ್ತಾ ವಿವರಿಸಿದ್ದ. ನಾನು ಮತ್ತೆ ಕುಣಿಯುತ್ತಾ ಅರ್ಧದಲ್ಲಿ ಬಿಟ್ಟುಬಂದ ಊಟವನ್ನು ಮುಗಿಸಲು ಊಟದಮನೆಗೆ ಅಪ್ಪನ ಜೊತೆಗೆ ಹೊರಟೆ. ಇತ್ತ ಲಾರ್ಡ್ಸ್ ಮೈದಾನದಿಂದ ಕಾಮೆಂಟರಿ ಅಲೆ ಅಲೆಯಾಗಿ ರೇಡಿಯೋದ ಮೂಲಕ ಕಿವಿಗೆ ಅಪ್ಪಳಿಸುತ್ತಿತ್ತು. ಸೀಮೆ ಎಣ್ಣೆಯಲ್ಲಿ ಉರಿಯುತ್ತಿದ್ದ ಲಾಟೀನಿನ ಬೆಳಕಿನಲ್ಲಿ ಅಂದು ಭಾರತದ ವಿಜಯೋತ್ಸವವನ್ನು ಅಪ್ಪನ ಎದೆಗೊರಗಿ ಆಚರಿಸಿದ್ದೆ.

ಅಂದು ತೋರಿದ ಅದೇ ಆಸ್ಥೆಯಿಂದ ಮತ್ತೊಮ್ಮೆ ಮಗುವಾಗಿ ಅಪ್ಪನ ಜೊತೆಗೆ ಈ ಬಾರಿಯ ಕ್ರಿಕೆಟ್ ವಿಶ್ವಕಪ್ ಫೈನಲ್ ಪಂದ್ಯವನ್ನು ಸವಿಯಬೇಕಿದೆ. ನೆನಪುಗಳಿವೆಯಲ್ಲಾ, ಅವು ಎಷ್ಟು ಬಾಗಿದರೂ ಮುರಿಯದ ಕಾಮನಬಿಲ್ಲುಗಳು. ಅಪ್ಪ ಎಂಬ ಗರ್ವ, ಭದ್ರತೆ, ಬೆನ್ನಿಗಿದ್ದಾನೆಂಬ ಧೈರ್ಯ ಮತ್ತವನ ಆಳ–ಅಗಲ ಮೀರಿದ ಪ್ರೀತಿಯು ಅರಿವಿನೊಳಗಿಳಿದು ನನ್ನನ್ನು ಆವರಿಸಿಬಿಟ್ಟಿದೆ. ಅತನೆದೆಯ ದಟ್ಟಕೂದಲಲ್ಲಿ ಗೂಡುಕಟ್ಟಿದ ಗುಬ್ಬಚ್ಚಿ ನಾನು. ಬೆಳಕಿನ ಜೊತೆ ನೆರಳೂ ಇರಬೇಕೆಂದನ್ನಿಸುವುದು ಬದುಕನ್ನು ತಿರುಗಿ ನೋಡಿದಾಗಲೇ.